ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ಸಂಖ್ಯೆ : ವಾಇ : ಉ ನಿ : ಸುಮಪ : 2014–15 : ಫೆಬ್ರವರಿ 18, 2015

# ಭಾರತೀಯ ಚಿತ್ರರಂಗದ ಹೆಸರಾಂತ ನಿರ್ಮಾಪಕ ಡಾ ಡಿ. ರಾಮಾನಾಯ್ಡು ಅವರ ನಿಧನಕ್ಕೆ ಮುಖ್ಯಮಂತ್ರಿ ಶೋಕ

ಬೆಂಗಳೂರು, ಫೆಬ್ರವರಿ 18 :

ಕನ್ನಡ ಭಾಷೆಯೂ ಸೇರಿದಂತೆ ಭಾರತೀಯ ಚಿತ್ರರಂಗದ ಹೆಸರಾಂತ ನಿರ್ಮಾಪಕ ಡಾ ದಗ್ಗುಬಾಟಿ ರಾಮಾನಾಯ್ಡು ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಕನ್ನಡ, ತೆಲುಗು, ತಮಿಳು, ಮಲಯಾಳಂ, ಹಿಂದಿ ಸೇರಿದಂತೆ ವಿವಿಧ ಭಾರತೀಯ ಭಾಷೆಗಳಲ್ಲಿ ಸುರೇಶ್ ಪ್ರೊಡಕ್ಷನ್ಸ್ ಹೆಸರಿನಲ್ಲಿ ವೈಯುಕ್ತಿಕವಾಗಿ 150 ಕ್ಕೂ ಹೆಚ್ಚು ಚಿತ್ರಗಳನ್ನು ನಿರ್ಮಿಸಿ ಗಿನ್ನಿಸ್ ದಾಖಲೆಯನ್ನು ಸ್ಥಾಪಿಸಿದ *ಮೂವಿ ಮೊಘಲ್* ಡಾ ಡಿ. ರಾಮಾನಾಯ್ಡು ಅವರು ಭಾರತೀಯ ಚಿತ್ರರಂಗದ ಬೆಳವಣಿಗೆಗೆ ಅದ್ಭುತ ಕೊಡುಗೆ ನೀಡಿದ್ದಾರೆ.

ಐದು ದಶಕಗಳ ಸುದೀರ್ಘ ಕಾಲದ ತಮ್ಮ ಚಿತ್ರರಂಗದ ಒಡನಾಟದಲ್ಲಿ ನೂರಾರು ನಟ–ನಟಿಯರು, ಹಲವಾರು ಪ್ರತಿಭಾವಂತ ನಿರ್ದೇಶಕರು, ಚಿತ್ರ ಸಾಹಿತಿಗಳು, ಸಂಗೀತ ನಿರ್ದೇಶಕರು, ಗೀತರಚನಾಕಾರರು, ನೃತ್ಯ ಸಂಯೋಜಕರು ಹಾಗೂ ತಂತ್ರಜ್ಞರಿಗೆ ಚಿತ್ರರಂಗದಲ್ಲಿ ಬೆಳೆದು ಬೆಳಗಲು ಅವಕಾಶ ಕಲ್ಪಿಸಿದ್ದಾರೆ.

ಹೈದರಾಬಾದ್‌ನಲ್ಲಿ ರಾಮಾನಾಯ್ಡು ಸ್ಟೂಡಿಯೋ ಪ್ರಾರಂಭಿಸಿ ತೆಲುಗು ಚಿತ್ರರಂಗಕ್ಕೆ ಭದ್ರ ನೆಲೆ ದೊರಕಿಸಿಕೊಟ್ಟ ಡಾ ರಾಮಾನಾಯ್ಡು ಅವರು ಬಾಪಟ್ಲಾ ಕ್ಷೇತ್ರದಿಂದ 13 ನೇ ಲೋಕಸಭೆಯನ್ನೂ ಪ್ರವೇಶಿಸಿ, ಚಿತ್ರ ಜೀವನದ ಜೊತೆಗೆ ಸಾರ್ವತ್ರಿಕ ಜೀವನವನ್ನೂ ಅವರು ಪ್ರವೇಶಿದ್ದರು ಎಂಬುದು ಗಮನಾರ್ಹ.

ಪದ್ಮಭೂಷಣ, ದಾದಾ ಸಾಹೇಬ್ ಪ್ರಶಸ್ತಿ ಒಳಗೊಂಡಂತೆ ತಮ್ಮ ಬತ್ತಳಿಕೆಯಲ್ಲಿ ಬಿರುದು ಬಾವಲಿಗಳ ಬೃಹತ್ ಗುಚ್ಛವನ್ನೇ ಇರಿಸಿಕೊಂಡಿದ್ದ ಡಾ ರಾಮಾನಾಯ್ಡು ಅವರ ನಿಧನವು ಇಡೀ ಚಿತ್ರ ಜಗತ್ತಿಗೆ ಭರಿಸಲಾರದಷ್ಟು ನಷ್ಟವನ್ನು ಉಂಟು ಮಾಡಿದೆ ಎಂದು ಶ್ರೀ ಸಿದ್ದರಾಮಯ್ಯ ಅವರು ಬಣ್ಣಿಸಿದ್ದಾರೆ.

****************

ಡಿ ಪಿ ಎಂ